ನಿಂತಲ್ಲೇ ಕುಸಿದು ಕೂತು ಅವಳು ಹೊಟ್ಟೆ ಹಿಡಿದುಕೊಂಡು ನಗತೊಡಗಿದಳು. ಕಣ್ಣಲ್ಲಿ ನೀರು ಬರುವಷ್ಟು ನಗೆ ಬಂದಿದ್ದು ಹೌದು.

'ಏನೇ, ನನ್ನ ನೋಡಿದ್ರೆ ನಗೋ ಹಂಗೆ ಕಾಣ್ತೀನನೇ? ಪ್ರಾಯಕ್ಕೆ ಸೊಕ್ಕು ಜಾಸ್ತಿ ಅಂತ ಮತ್ತ್ಯಾತಕ್ಕೆ ಹೇಳ್ತಾರೆ? ಒಳ್ಳೇ ಸೊಸೆ ಸಿಕ್ಕಿದ್ದಿ ಈ ಮನೆಗೆ...'

ವೆಂಕಮ್ಮನಿಗೂ ಅಚ್ಚರಿ. ಯಾವತ್ತೂ ಗಂಭೀರವಾಗಿರುತ್ತಿದ್ದವಳಿಗೆ ಇದ್ದಕ್ಕಿದ್ದಂತೆ ಏನಾಯ್ತು? 'ಅಮಾಸೆ ಯಾವತ್ತು?' ಎಂದು ತಟ್ಟನೆ ಮನಸ್ಸು ಲೆಕ್ಕ ಹಾಕತೊಡಗಿ, 'ಅಯ್ಯೋ ಅತ್ತೆ, ಮೊದಲು ಕಾಫಿ ಪಾತ್ರೆ ಕೆಳಗಿಡಿ. ಮೂಲೇಲಿರೋ ಹಿಡಿಕುಂಟೆ ತಗಳ್ಳಿ...'

'ಯಾಕೇ? ತಿಂದಿದ್ದು ಕಣ್ಣಿಗೆ ಬಂತಾ? ಮನೆಗೆ ನೆಂಟ್ರು ಬಂದ್ರೆ ಮರ್ಯಾದೆ ತೆಗೀತೀಯಾ?' ಕೇಳಿದರು ವೆಂಕಮ್ಮ.

'ಅತ್ತೇ... ಅತ್ತೇ... ನಿಮ್ಮ ಮಗ...'

ಈಗ ವೆಂಕಮ್ಮನಿಗೆ ಯಥಾರ್ಥದ ಅರಿವಾಯ್ತು. 'ಮುಂಡೇಗಂಡ, ನಿನ್ನ ಹೊಟ್ಟೆ ಒಡಿಯ...' ಎನ್ನುತ್ತಾ ಸತ್ಯಕ್ಕೂ ಮೂಲೆಯಲ್ಲಿದ್ದ ಹಿಡಿಕುಂಟೆ ಕೈಗೆ ತೆಗೆದುಕೊಳ್ಳುತ್ತಿದ್ದಂತೆ ಉಟ್ಟ ಸೀರೆಯ ನೆರಿ ಕಾಲಿಗೆ ತೊಡರುವುದನ್ನೂ ಲೆಕ್ಕಿಸದೆ ವೆಂಕಟರಾಮು ಪರಾರಿ.

ಇದೊಂದು ಮಾತ್ರವಾ? ಅವನು ಮಾಡುತ್ತಿದ್ದ ಚೇಷ್ಟೆಗಳಿಗೆ ಲೆಕ್ಕ ಎಲ್ಲಿದೆ? ಅಣ್ಣ ದೂರ್ವಾಸಮುನಿ ಆದರೆ ತಮ್ಮ ತದ್ವಿರುದ್ಧ. ಹುಡುಗ ಎಷ್ಟು ಹಾಸ್ಯಪ್ರವೃತ್ತಿಯವನೋ ಅಷ್ಟೇ ಮೃದು ಹೃದಯದವನು. ಅವನನ್ನು ನೆನೆದರೆ ಸೀತಾಲಕ್ಷ್ಮಿಯ ಹೃದಯದಲ್ಲಿ ಭಾವತರಂಗವೊಂದು ಕದಲಿದಂತಾಗುತ್ತದೆ. ಹೇಳಿಕೊಳ್ಳಲಾಗದಂಥಾ ಏನೋ ಒಂದು ಮನದುಂಬುತ್ತದೆ ಅವತ್ತಿಗೂ, ಇವತ್ತಿಗೂ...

***

ದೂರ್ವಾಸ ಮುನಿಯ ಸಹವಾಸದಲ್ಲಿ ಸೀತಾಲಕ್ಷ್ಮಿ ಅನುಭವಿಸಿದ ಪಾಡು ಒಂದೊಂದಲ್ಲ. ಶಿವರಾಮನಿಗೆ ಯಾವಾಗ, ಯಾಕೆ ಪಿತ್ಥ ಕೆರಳುತ್ತದೆ ಎಂದು ಗೊತ್ತು ಮಾಡಿಕೊಳ್ಳುವುದಕ್ಕೇ ಅವಳಿಗೆ ವರ್ಷಗಟ್ಟಲೆ ಬೇಕಾಗಿತ್ತು. 'ಮಾಡೋರೊಬ್ರಿದ್ರೆ ನೋಡು ನನ್ನ ಸಿರಿ' ಅನ್ನುವ ಗಾದೆ ಉಂಟು. ಸೀತಾಲಕ್ಷ್ಮಿಗೆ ಗಂಡ ಬಟ್ಟೆ ಒಗೆಯಲು ಹಾಕಿದ ಅಂದರೆ ಮೈ ಮುಳ್ಳಾಗುತ್ತಿತ್ತು. ಬೆಳ್ಳಗೆ ಒಗೆದ ಪಂಚೆಯನ್ನು ಕೈಯಿಂದ ತಿಕ್ಕಿ ತೀಡಿ ಮಡಚಿಡಬೇಕು. ಬಟ್ಟೆ ಒಂದಿಷ್ಟೂ ಮುದುರಿರಬಾರದು. ಎಷ್ಟೆಲ್ಲಾ ಮಾಡಿದರೂ ಏನೋ ಹುಳುಕು ಹುಡುಕುತ್ತಾನೆ ಗಂಡ. ಬಟ್ಟೆ ಮೂಸಿ ನೋಡಿ, 'ಸೋಪಿನ ವಾಸನೆ ಬರ್ತಿದೆಯಲ್ಲೇ, ಸಮಾ ಜಾಲಿಸಿ ಹಿಂಡಿದೀಯಾ? ಹಂಗ್ಯಂಗೇ ಕಣ್ಕಟ್ಟು ಮಾಡಿದೀಯಾ?' ಗುಬೆ ಕೂರುತ್ತದೆ. ಒಂದು ಸಲ ಸೀತಾಲಕ್ಷ್ಮಿಯ ಅಣ್ಣ ಮನೆಗೆ ಬಂದಿದ್ದ. ಅಪರೂಪದ ನೆಂಟ ಎಂದು ಬೆಳಗಿನ ತಿಂಡಿಗೆ ಇಡ್ಲಿ. ಮನೆಯಲ್ಲೇ ಅಕ್ಕಿ ಬೀಸಿ ಸಣ್ಣಗೆ ತರಿ ಮಾಡಿ, ಒದಗಿಸಿ ಒದಗಿಸಿ ಉದ್ದಿನಬೇಳೆ ಅರೆದು ಮಾಡಿದ ತಿಂಡಿ. ಹೂವಿನಷ್ಟು ಮೃದುವಾದ ಇಡ್ಲಿಗಳನ್ನು ಬಾಳೆಲೆ ಸಿಗುಳಿಗೆ

## ಕಳೆದ ಸಂಚಿಕೆಯಲ್ಲಿ



ಶಿವರಾಮನ ಸಿಡುಕುತನಕ್ಕೆ ಅವನು ಅನುಭವಿಸಿದ ಕಷ್ಟಕೋಟಲೆಗಳೇ ಕಾರಣ ಎಂದು ವೆಂಕಮ್ಮ ತಮ್ಮ ಸೊಸೆ ಸೀತಾಲಕ್ಷ್ಮಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸಿದರು. ವೆಂಕಮ್ಮನ ಮಗಳಿಗೆ ಒಳ್ಳೆಯ ಮನೆಯೇನೋ ದೊರೆಯಿತು. ಆದರೆ, ಅವಳ ಗಂಡ ಹೆಚ್ಚು ದಿನ ಬದುಕಲಿಲ್ಲ. ಕಾಡಿಗೆ ಹೋದವನು ಹೆಜ್ಜೇನಿನ ದಾಳಿಗೆ ಸಿಲುಕಿ ಜೀವ ಕಳೆದುಕೊಂಡಿದ್ದ. ಕೇಶಮುಂಡನ ಮಾಡಿಸಿಕೊಳ್ಳಲು ನಿರಾಕರಿಸಿದ ಕಮಲಾ, ಗಂಡನ ಮನೆಯಿಂದ ತವರಿಗೆ ಓಡಿಬಂದಳು. ಮದುವೆ ಸಮಯದಲ್ಲಿ ತವರಿನವರು ಕೊಟ್ಟಿದ್ದ ಒಡವೆಗಳೆಲ್ಲ ಗಂಡನ ಮನೆಯ ಪೆಟಾರಿಯಲ್ಲೇ ಉಳಿದವು. ಅವುಗಳನ್ನು ಕೇಳಲು ಹೋದ ಕಮಲಾಳ ತಂದೆ ದಾರಿ ಮಧ್ಯದಲ್ಲೇ ಕೊನೆಯುಸಿರೆಳೆದರು. ಆವರ ಸಾವು ನಿಗೂಢವಾಗಿಯೇ ಉಳಿಯಿತು. ಅಕ್ಕನ ಗಂಡ ಹಾಗೂ ತಂದೆಯ ಸಾವುಗಳು ಶಿವರಾಮನ ಮೇಲೆ ಪರಿಣಾಮ ಬೀರಿದವು. ಗಂಡನದು ಸಿಡುಕು ಮೋರೆಯದಾದರೆ, ಮೈದುನನದು ಸಂಪೂರ್ಣ ತದ್ವಿರುದ್ಧ ಸ್ವಭಾವ. ವೆಂಕಟರಾಮು ಮನೆಯ ಹೆಣ್ಣುಮಕ್ಕಳ ಕಷ್ಟಸುಖಕ್ಕೆ ಒದಗುತ್ತಿದ್ದ ಹುಡುಗ.

ಬಡಿಸಿದ್ದಳು ಸೀತಾಲಕ್ಷ್ಮಿ. ಜೊತೆಗೆ ಜೋನಿಬೆಲ್ಲ. 'ತುಪ್ಪ ಬೇಡ ಕಣೇ, ಬೆಣ್ಣೆ ಹಾಕು. ಇಡ್ಲಿ ಜೊತೆಗೆ ಲಾಯ್ಕಿರುತ್ತೆ' ಅಂದಿದ್ದರು ಅತ್ತೆ. ಸೀತಾಲಕ್ಷ್ಮಿ ಬೆಳಿಗ್ಗೆ ಇನ್ನೂ ಕಡೆದ, ತಾಜಾ ಮಜ್ಜಿಗೆಯಲ್ಲಿ ಹಾಗೇ ಉಂಡೆ ಕಟ್ಟಿಟ್ಟಿದ್ದ ಬೆಣ್ಣೆಯನ್ನು ಭಾವ, ಭಾವ ನೆಂಟನ ಎಲೆಗೆ ಬಡಿಸಿದ್ದಳು. ಶಿವರಾಮನ ಕಣ್ಣು ಕೆಂಪಾಗಿತ್ತು.

'ಮಜ್ಜಿಗೆ ತಪ್ಪಲೆಯಿಂದ ಹಾಗೇ ಬೆಣ್ಣೆ ತೆಗೆದು ಹಾಕ್ತಿದೀಯಲ್ಲ, ಕೆಲಸ ಮಾಡೋ ಹುಟ್ಟಾ ಇದು? ಬೆಣ್ಣೆ ಜೊತೆ ಮಜ್ಜಿಗೇನೂ ಎಲೆಗೆ ಬಿದ್ದಿದೆ ನೋಡು...'

ಕೈಯಿಂದ ಜಾರಿ ನಾಲ್ಕಾರು ಹನಿ ಬಳ್ಳೆಗೆ ಬಿದ್ದಿದ್ದು ಹೌದು. ಅದೇನು ಮಹಾಪರಾಧ? ತಮಾಷೆಯಾಗೇ ಅಣ್ಣ ಹೇಳಿದ್ದ,

'ಅಯ್ಯೋ, ಸುಮ್ನಿರಿ ಭಾವ. ನಿಮ್ದೊಳ್ಳೇ ಕತೆ. ಏನಾಯ್ತು ಈಗ?'

'ಯಾವ ಕೆಲಸ ಮಾಡೋಕೂ ಒಂದು ಕ್ರಮ ಅಂತ ಇರಲ್ವಾ? ಕೇಳ್ಬೇಡಿ. ಎಲ್ಲಾ ಮನಸೋ ಇಚ್ಛೆ...'

ಅಣ್ಣ ನಕ್ಕಂತೆ ಮಾಡಿದ್ದ. 'ಸಾಕು ಸುಮ್ನೆ ತಿನ್ನೋ...' ಅನ್ನುವ ಯಜಮಾನಿಕೆ ಮಾತಾಡಬಹುದಾಗಿದ್ದ ಅತ್ತೆ ನೆಂಟರೆದುರು ಮಗರಾಯ ಇನ್ನೇನಾದರೂ ಅಂದುಗಿಂದರೆ ಎನ್ನುವ ಹಿಂಜರಿಕೆಯಿಂದ ಬಾಯಿ ಬಿಗಿ ಹಿಡಿದಿದ್ದರು. ಎಲ್ಲಾ ಎಷ್ಟು ಸಣ್ಣ ಸಣ್ಣ ಸಂಗತಿಗಳು. ಆದರೆ ಮನಸ್ಸಿನ ಮೇಲೆ ಬಿದ್ದ ಗೀಚು ಅಳಿಸಿ ಹೋಗುವಂತವಲ್ಲ. ಯಾರಾದರೂ ಬಂದಾಗ ಗಂಡನ ಜೋರು ಜಾಸ್ತಿಯಾಗುವುದನ್ನು ಗಮನಿಸಿದ್ದಳು ಸೀತಾಲಕ್ಷ್ಮಿ. ಹೆಂಡತಿಯನ್ನು ಅಂಕೆಯಲ್ಲಿಟ್ಟುಕೊಂಡು ಆಳುತ್ತಿದ್ದೇನೆಂದು ತೋರಿಸಿಕೊಳ್ಳುವ ಪುರುಷಾಹಂಕಾರ ಇರಬಹುದೇನೋ. ಹೊರಡುವಾಗ ಅಣ್ಣ ಸಮಯ ಸಾಧಿಸಿ ಕೇಳಿದ್ದ,

'ಹೇಗಿದೀಯೇ? ಚೆನ್ನಾಗಿ ನೋಡ್ಕಂತಾನಾ ಗಂಡ?'

'ಓಹೋ' ಅನ್ನುವಂತೆ ಗಲಗಲ ತಲೆ ಅಲುಗಿಸಿದ್ದಳು ತಂಗಿ. ಅಣ್ಣ ಮುಖ ಬಾಡಿಸಿಕೊಂಡು ಹೋದ ಎಂದು ಅವಳಿಗೆ ಸಕಾರಣವಾಗಿ ಅನ್ನಿಸಿತ್ತು. ಬಾಳೆಹಣ್ಣಿನ ಗುಡಾಣದಲ್ಲಿ ಎನ್ನುವಂತೆ ಸಾಕಿ ದೊಡ್ಡ ಮಾಡಿದ ತಂಗಿ. ಮಲತಂಗಿಯಾದರೇನು? ಪ್ರೀತಿ ಬೆಟ್ಟದಷ್ಟಿತ್ತು. ತೌರಿನಲ್ಲಿ ಸಲ್ಲದ ಮಾತುಗಳನ್ನು ಯಾವತ್ತೂ ಕೇಳಿದವಳಲ್ಲ ಸೀತಾಲಕ್ಷ್ಮಿ. ಆ ಕಾರಣದಿಂದಲೇ ಸಣ್ಣ ವಿಷಯವೂ ದೊಡ್ಡದಾಗಿ ಕಾಡುತ್ತದೆಯಾ? ಶಿವರಾಮ ಮನೆಯಲ್ಲಿರುವಾಗ ಯಾರೂ ನಡುಮನೆಯ ಹೊಸಿಲು ದಾಟಿ ಮುಂಚೀಕಡೆಗೆ ಕಾಲಿಡುತ್ತಿರಲಿಲ್ಲ. ಹೋದರೂ ಕುರ್ಚಿಯ ಮೇಲೆ ಕೂರುವ ದುಸ್ಸಾಹಸಕ್ಕೆಳಿಯುತ್ತಿರಲಿಲ್ಲ. ಕೂತರೂ ಕಾಲ ಮೇಲೆ ಕಾಲು ಹಾಕಿ ಕೂರುವಂತಿರಲಿಲ್ಲ. ಹೆಂಗಸು ಅಂದರೇನು? ಕಾಲ ಮೇಲೆ ಕಾಲು ಹಾಕಿ ಗಂಡಸರ ಸಮ ಕೂರುವುದೆಂದರೇನು? ಶಿವರಾಮ ಮನೆ ಹೆಂಗಸರನ್ನು ಇಷ್ಟು ಕಟ್ಟುನಿಟ್ಟಿನಲ್ಲಿದ್ದ. ಏನಾದರೂ ವಿನಾಯಿತಿ ಅನ್ನುವುದಿದ್ದರೆ ಅಕ್ಕನಿಗೆ. ಅದೂ ಒಂದು ಮಿತಿಯಲ್ಲಿ.

ಕಡಿಮೆ ಅಂದರೆ ಏಳೆಂಟು ಆಳುಗಳು ದಿನಾ ಕೆಲಸಕ್ಕೆ ಬರುತ್ತಿದ್ದ ಮನೆ. ಘಟ್ಟದ ಕೆಳಗಿಂದ ಸೇರೆಗಾರರು ಆಳುಗಳನ್ನು ಒಟ್ಟು ಹಾಕಿ ಕರೆದುಕೊಂಡು ಬರುತ್ತಿದ್ದರು. ಅವರಿಗೆಂದು ಗುಡ್ಡದ ತಗ್ಗಿನಲ್ಲಿ ಪ್ರತ್ಯೇಕ ಬಿಡಾರಗಳು. ಎಷ್ಟು ಜನ ಇದ್ದರೂ ಕೆಲಸಕ್ಕೆ ಬರ ಇರುತ್ತಿರಲಿಲ್ಲ. ಕೃಷಿ ಚಟುವಟಿಕೆಗಳು ಮಾನವಶಕ್ತಿಯನ್ನೇ ನಂಬಿಕೊಂಡು ನಡೆಯುತ್ತಿದ್ದ ಕಾಲಮಾನ. ಮಳೆಗಾಲ ಶುರುವಾಯ್ತು ಅಂದರೆ ಅಡಿಕೆ ತೋಟದಲ್ಲಿ ಹರಕೆ ಹೇಳಿಕೊಂಡಂತೆ ಕೊಳೆರೋಗ. ಅಡಿಕೆಕಾಯಿಗಳು ಉದುರಿ ಬೀಳುವುದನ್ನು ಕಂಡರೆ ಬೆಳೆಗಾರರ ಹೊಟ್ಟೆಯಲ್ಲಿ ಜೀರಿಗೆಮೆಣಸು ನುರಿದ ಹಾಗಾಗುತ್ತಿತ್ತು. ಆರ್ಥಿಕ ಬೆಳೆ ಕೈ ಕೊಟ್ಟರೆ ವರ್ಷಾವಧಿ ಖರ್ಚಿಗೆ ಚೊಟಚೊಟ. ವಾಲಾಡುವ ಮರ ಹತ್ತಿ ಅಡಿಕೆಕೊನೆಗೆ ಔಷಧಿ ಸಿಂಪರಣೆ ಮಾಡುವ ಅನುಭವಿಗಳಿಗೆ, ಕೊಯ್ಲಿನ ಕಾಲದಲ್ಲಿ ಕೊನೆ ತೆಗೆಯುವವರಿಗೆ ಉಳಿಕೆ ಆಳುಗಳಿಗಿಂತಾ